O.S. ನಂಬರಃ 90/2023

ಪಿ. ಡಬ್ಲ್ಯೂಃ 2

ದಿಃ 06-03-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ 1ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಎಂ.ಎ.ಆರ್ ಇವರಿಂದಃ

ನೀವು ಯಾವುದಾದರೂ ಮನೆಗೆ ವಿದ್ಯುತ್ ಕನೆಕ್ಷನ್ ಕೊಡಬೇಕಾದರೆ ಯಾವ ಯಾವ ದಾಖಲಾತಿಗಳನ್ನು ಕೇಳುತ್ತೀರಿ ಎಂದರೆ ಸಾಕ್ಷಿಯು ಎನ್ ಓ ಸಿ, ಮನೆಯ ಹಾಗೂ ಅಂಗಡಿಯ ತೆರಿಗೆ ಪಾವತಿ, ಕಟ್ಟಡ ಪರವಾಣಿಗೆ ಇವುಗಳನ್ನು ಕೇಳುತ್ತೇವೆ ಎಂದು ನುಡಿಯುತ್ತಾರೆ. ಯಾವ ಎನ್ ಓ ಸಿ ಪಡೆದುಕೊಳ್ಳುತ್ತೀರಿ ಎಂದರೆ ಸಾಕ್ಷಿಯು ಗ್ರಾಮ ಪಂಚಾಯತಿ ಅಥವಾ ಪುರಸಭೆಯವರು ಕೊಟ್ಟ ಎನ್ ಓ ಸಿ ಯನ್ನು ಪಡೆದುಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ಆಂಟಿ ತೆಪ್ಟ ಲಾ ಯಾವ ಉದ್ದೇಶಕ್ಕಾಗಿ ಮಾಡಲಾಗಿದೆ ಎಂದರೆ ಸಾಕ್ಷಿಯು ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಬಳಸಿಕೊಂಡರೆ ಸಕ್ರಮವಾಗಿ ಮಾಡಿಕೊಡುವ ಉದ್ದೇಶದಿಂದ ಮಾಡಲಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ವಿದ್ಯುತ್ ಸೋರಿಕೆಯನ್ನು ತಡೆಗಟ್ಟುವ ಉದ್ದೇಶದಿಂದ ಮಾಡಲಾಗಿದೆ ಎಂದು ನುಡಿಯುತ್ತಾರೆ. ಅಂಕೋಲಾದಲ್ಲಿ ಸಾಕಷ್ಟು ಗೂಡಂಗಡಿಗಳಿಗೆ ವಿದ್ಯುತ ಸಂಪರ್ಕವನ್ನು ಕೊಟ್ಟಿರುತ್ತೀರಿ ಎಂದರೆ ಸರಿ. ಅವೆಲ್ಲವು ರಸ್ತೆಯ ಪಕ್ಕ ಫುಟ್ ಪಾತ್ ನಲ್ಲಿ ಇರುವಂತಹ ಅಂಗಡಿಗಳು ಎಂದರೆ ಸರಿ. ಅವುಗಳಿಗೆ ಯಾವುದೇ ಜಮೀನಿನ ಆಧಾರ ಪತ್ರ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮುಚ್ಚಳಿಕೆ ಪತ್ರವನ್ನು

ಬರೆಸಿಕೊಂಡು ಅಳವಡಿಸಿಕೊಡುತ್ತೇವೆ ಎಂದು ನುಡಿಯುತ್ತಾರೆ. ಅಂಕೋಲಾ ಪುರಸಭೆ ಪ್ರದೇಶದಲ್ಲಿ ಎಲ್ಲ ಗೂಡಂಗಡಿಗಳಿಗೂ ಸಹ ಅಳವಡಿಸಿಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಅಕ್ರಮವಾಗಿ ಸಂಪರ್ಕವನ್ನು ಪಡೆದುಕೊಂಡವರಿಗೆ ಮಾತ್ರ ಸಕ್ರಮವಾಗಿ ಅಳವಡಿಸಿಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ವಾದಿಯೂ ಸಹ ಬೀದಿ ಬದಿಯಲ್ಲಿ ತರಕಾರಿ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. ಹಾಗೂ ಅವರಿಗೆ ಯಾವುದೇ ಅಧಿಕೃತ ಕಟ್ಟಡ ಇರುವುದಿಲ್ಲ ಎಂದರೆ ಸರಿ. ಸಂಪರ್ಕ ಕೊಡುವ ಸಂದರ್ಭದಲ್ಲಿ ಯಾವ ಅಧಿಕಾರಿಗಳು ಇದ್ದರು ಎಂದರೆ ಸಾಕ್ಷಿಯು ಟೀಮ್‌ನಲ್ಲಿ ಸಹಾಯಕ ಇಂಜಿನೀಯರ್ ಗಳನ್ನು ಡೆಪ್ಯೂಟ್ ಮಾಡಲಾಗಿತ್ತು ಎಂದು ನುಡಿಯುತ್ತಾರೆ.

2. ವಿದ್ಯುತ್ ಮೀಟರನ್ನು ಎಲ್ಲಿ ಅಳವಡಿಸಲಾಗಿದೆ ಎಂದು ದಾಖಲಾತಿ ಇರುವುದಿಲ್ಲ ಎಂದರೆ ಸಾಕ್ಷಿಯು ಅವರು ದಾಖಲಾತಿ ಕೊಟ್ಟ ಪ್ರಕಾರ ಅಂಗಡಿಯ ಎಡಬದಿಯ ಕಾರ್ನರ್ ನಲ್ಲಿ ಅಳವಡಿಸಲಾಗಿದೆ ಎಂದು ನುಡಿಯುತ್ತಾರೆ. ವಾದಿಯು ಅಧಿಕೃತ ಅಂಗಡಿಯಲ್ಲಿ ಯಾವುದೇ ವ್ಯಾಪಾರ ಮಾಡಿರುವುದಿಲ್ಲ ಎಂದರೆ ಸರಿ. ನೀವು ಈಗ ಕೇವಲ 3 ವರ್ಷಗಳಿಗೆ ಸಂಬಂಧಪಟ್ಟು ಮಾತ್ರ ಪಾವತಿಯನ್ನು ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿಯು ನಮ್ಮ ಸಿಸ್ಟಮ್ ನಲ್ಲಿ ಎಲ್ಲ ವರ್ಷಕ್ಕೆ ಸಂಬಂಧಪಟ್ಟ ಬಿಲ್ಲುಗಳು ಇರುತ್ತವೆ ಎಂದು ನುಡಿಯುತ್ತಾರೆ. ನೀವೇನಾದರೂ ದಾಖಲಾತಿಗಳನ್ನು ತರೆಸಲು ಪತ್ರ ಬರೆದಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ದಿಃ28-10-2024 ರಂದು ಪತ್ರವನ್ನು ಬರೆದಿರುತ್ತೇವೆ ಎಂದು ನುಡಿಯುತ್ತಾರೆ. ಮತ್ತೆ ಇದುವರೆಗೂ ವಾದಿಯು

ಅಕ್ರಮಸಕ್ರಮ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕವನ್ನು ಬಳಸಿಕೊಳ್ಳುತ್ತಿದ್ದಾರೆ ಎಂದರೆ ಸರಿ.

2ನೇ ಪ್ರತಿವಾದಿಯ ಪರ ವಕೀಲರು 1ನೆ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು, ಅದರಂತೆ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.